# ನ್ಯೂ ಎನರ್ಜಿ ಕಾನ್ಸೆಪ್ಟ್ ಬಗ್ಗೆ ಕಿರು ಪರಿಚಯ

ಸ್ನೇಹಿತರೇ, ನಾನು ನಿಮಗೆ ನ್ಯೂ ಎನರ್ಜಿ ಕಾನ್ಸೆಪ್ಟ್ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯವನ್ನು ಮಾಡಿಸಿ ಅದರ ಕೆಲವೊಂದು ವಿಷಯಗಳ ಬಗ್ಗೆ ನಿಮಗೆ ತಿಳಿಸಬೇಕೆಂದು ಬಯಸುತ್ತೇನೆ, "ನ್ಯೂ ಎನರ್ಜಿ" ಎಂದರೆ ಪ್ರತಿಯೊಬ್ಬರಿಗೂ ತಿಳಿದ ಹಾಗೆ ಇದು "ನೂತನ ಶಕ್ತಿ". ಮತ್ತು "ನ್ಯೂ ಎನರ್ಜಿ ಕಾನ್ಸೆಪ್ಟ್" ಎನ್ನುವುದು "ನೂತನ ಶಕ್ತಿಯ ಪರಿಕಲ್ಪನೆ". ಎಂದರೆ ಈ ಶಕ್ತಿಯನ್ನು ಕುರಿತು ಆಳವಾಗಿ ಅಧ್ಯಯನವನ್ನು ಮಾಡಿ, ಅನುಭವಿಸಿ ವ್ಯಕ್ತಗೊಳಿಸುವ ಭಾವನೆ ಎಂದರ್ಥ.

ನಿಮಗೆಲ್ಲರಿಗೂ ತಿಳಿದ ಹಾಗೆ ಈ ಸೃಷ್ಟಿಯಲ್ಲಿ ಸ್ವಚ್ಛವಾದ ಶಕ್ತಿಯು ಅನಂತವಾಗಿದೆ. ಈ ಶಕ್ತಿಯನ್ನೇ ನಾವು ನ್ಯೂ ಎನರ್ಜಿ ಎಂದು ಹೇಳುತ್ತಿರುವುದು. ಈ ಶಕ್ತಿಯನ್ನು ನಮ್ಮ ಜೀವನದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂದು, ಏಕೆ ಉಪಯೋಗಿಸಿಕೊಳ್ಳಬೇಕೆಂದು, ಯಾವುದಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದು ಮತ್ತು ಈ ಶಕ್ತಿಯನ್ನು ಉಪಯೋಗಿಸಿಕೊಂಡಾಗ ಏನು ಸಂಭವಿಸುತ್ತದೆಂದು ವಿವರವಾಗಿ ತಿಳಿದುಕೊಂಡು, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ, ಪ್ರತಿಯೊಂದು ಪರಿಸ್ಥಿತಿಯಲ್ಲೂ ಅಳವಡಿಸಿಕೊಂಡು ಆನಂದದಿಂದ ಜೀವಿಸಬೇಕೆನ್ನುವುದೇ ಈ ನ್ಯೂ ಎನರ್ಜಿ ಪರಿಕಲ್ಪನೆಯ ಮುಖ್ಯ ಉದ್ದೇಶ. ಹಾಗೂ ಇದು ನಮಗಷ್ಟೇ ಸೀಮಿತವಾಗಿರದೇ, ಲೋಕಕಲ್ಯಾಣಕ್ಕೂ ಸಹಾಯವಾಗಬೇಕು.

ಇದನ್ನು ತೆಲಂಗಾಣ ರಾಜ್ಯದ ನಿವಾಸಿಯಾದ, ಪಾಲೆಪು. ಶ್ರೀಧರ್ ಸರ್ ಅವರು ಇಂಚು ಮಿಂಚು 2004 ರಿಂದ ಪ್ರಾರಂಭಿಸಿ ಇಲ್ಲಿಯವರೆಗೆ ಈ ನ್ಯೂ ಎನರ್ಜಿಯ ಬಗ್ಗೆ ಅನೇಕ ವಿಷಯಗಳನ್ನು ತಾವೇ ಸ್ವತಃ ಅಧ್ಯಯನವನ್ನು ಮಾಡಿ, ಪ್ರತಿಯೊಂದನ್ನು ಪ್ರಾಯೋಗಿಕವಾಗಿ ತಮ್ಮ ಜೀವನದ ಪ್ರತಿಯೊಂದು ಪರಿಸ್ಥಿತಿಯಲ್ಲಿ ಮತ್ತು ಘಟನೆಗಳಲ್ಲಿ ಅಳವಡಿಸಿಕೊಂಡು, ಅನುಭವಿಸಿ ಪಡೆದುಕೊಂಡಿರುವ ಅದ್ಭುತವಾದ ಜ್ಞಾನ. ಆದುದರಿಂದ ಅವರು ಸೂಚಿಸಿದಂತೆ ಪ್ರತಿಯೊಬ್ಬರೂ ಈ ನ್ಯೂ ಎನರ್ಜಿ ಪರಿಕಲ್ಪನೆಯ ವಿಷಯಗಳನ್ನು ತಿಳಿದುಕೊಂಡು, ತಮ್ಮ ಜೀವನದಲ್ಲೂ ಸಹ ಅಳವಡಿಸಿಕೊಂಡು, ಅದ್ಭುತವಾದ ಈ ಸ್ವಚ್ಛವಾದ ಶಕ್ತಿಯ ಸಹಾಯದಿಂದ ತಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು. ಹಾಗೂ ಈ ನ್ಯೂ ಎನರ್ಜಿಯ ಸಹಾಯದಿಂದ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಎಲ್ಲಾ ಪರಿಸ್ಥಿತಿಗಳಲ್ಲೂ ಆನಂದದಿಂದ ಜೀವನವನ್ನು ಸಾಗಿಸಬೇಕು. ಅಂತಿಮವಾಗಿ ಪ್ರತಿಯೊಬ್ಬರೂ ಇದರ ಮೂಲಕ "ನಾನೇ ದೇವರು" ಎಂದು ತಿಳಿದುಕೊಳ್ಳಬೇಕು ಎನ್ನುವುದೇ ಈ ನ್ಯೂ ಎನರ್ಜಿ ಪರಿಕಲ್ಪನೆಯ ಗುರಿ ಮತ್ತು ಮುಖ್ಯ ಉದ್ದೇಶ.

ಇದನ್ನು ಕೇವಲ ಪರಿಕಲ್ಪನೆಯನ್ನಾಗಿ ಮಾತ್ರ ಪರಿಗಣಿಸಿ ಸೀಮಿತಗೊಳಿಸಿ, ಸೈದ್ಧಾಂತಿಕದ ವಿಷಯಗಳೆಂದು ಓದಿ ತಿಳಿದುಕೊಂಡರೆ ಸಾಲದು. ಪ್ರತಿಯೊಬ್ಬರೂ ಇದನ್ನು ಆಸಕ್ತಿಯಿಂದ ಓದಿ, ಅರ್ಥಮಾಡಿಕೊಂಡು, ಪ್ರಾಯೋಗಿಕವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಶಾರೀರಕ ಮತ್ತು ಮಾನಸಿಕ ಸ್ಥಾಯಿಯಲ್ಲಿ ಅನುಭವಿಸಿ, ತಮ್ಮ ಸಮಸ್ಯೆಗಳನ್ನು ತಾವಾಗಿ ಪರಿಹರಿಸಿಕೊಂಡು, ಜ್ಞಾನವನ್ನು ಪಡೆದಾಗ ಮಾತ್ರ ಇದರ ಪ್ರಾಮುಖ್ಯತೆ ಮತ್ತು ಮೌಲ್ಯದ ಬಗ್ಗೆ ನಿಮಗೆ ಪರಿಪೂರ್ಣ ಅರಿವು ಮೂಡುತ್ತದೆ ಹಾಗೂ ಇದರಿಂದ ಉಂಟಾಗುವ ಪರಿಣಾಮಗಳಿಂದಾಗಿ, ನಿಮ್ಮಲ್ಲಿ ಮತ್ತಷ್ಟು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆನ್ನುವ ಆಸಕ್ತಿ, ಉತ್ಸಾಹ, ಪ್ರೋತ್ಸಾಹ ಉಂಟಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಆದುದರಿಂದ ನಿಮಗೆ ಅನುಕೂಲವಾಗಲೆಂದು ಶ್ರೀಧರ್ ಸರ್ ಅವರು ತಮ್ಮ ಅನುಭವ ಜ್ಞಾನದಿಂದ ಬರೆದ ನ್ಯೂ ಎನರ್ಜಿ ಪರಿಕಲ್ಪನೆಯ ಹಲವಾರು ವಿಷಯಗಳನ್ನು ನಿಮಗೆ ಒಂದೊಂದಾಗಿ ಗ್ರಂಥ ರೂಪದಲ್ಲಿ ತಲುಪಿಸಬೇಕೆನ್ನುವುದೇ ಅವರ ಈ ಪ್ರಯತ್ನ. ಈ ನ್ಯೂ ಎನರ್ಜಿ ಪರಿಕಲ್ಪನೆಯ ವಿಷಯಗಳು ನಿಮಗೆ ಇಷ್ಟವಾದರೆ ನೀವು ಸಹ ಇದನ್ನು ನಿಮ್ಮ ಪ್ರತಿ ನಿತ್ಯದ ಜೀವನದಲ್ಲಿ ಪ್ರಾಯೋಗಿಕವಾಗಿ ಅಳವಡಿಸಿಕೊಂಡು ಇದರ ಸಹಾಯದಿಂದ ಜ್ಞಾನವನ್ನು ಹೆಚ್ಚಿಸಿಕೊಳ್ಳಿರಿ ಮತ್ತು ಆನಂದಮಯವಾಗಿ ಜೀವನವನ್ನು ಸಾಗಿಸಿರಿ. ಇದರ ಬಗ್ಗೆ ಇನ್ನಷ್ಟು ವಿಷಯಗಳ ಬಗ್ಗೆ, ಮತ್ತಷ್ಟು ವಿವರವಾಗಿ ತಿಳಿದುಕೊಳ್ಳಬೇಕೆನ್ನುವ ಆಸಕ್ತಿ ಇದ್ದರೆ, ನೀವು ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ.

**ಧನ್ಯವಾದಗಳು.**